## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸುವ ಕುರಿತು.

ಉಲ್ಲೇಖ :
1 ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 47 ಎಮ್‌ಎಸ್‌ಟಿ 2018, ದಿನಾಂಕ : 16/03/2018.
2 ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 47 ಎಮ್‌ಎಸ್‌ಟಿ 2018, ದಿನಾಂಕ : 14/09/2018.
3 ಸಚಿವ ಸಂಪುಟದ ನಿರ್ಣಯ ಪ್ರಕರಣ ಸಂಖ್ಯೆ : ಸಿ: 319/2021 / ಸಿ : 320/2021/ ಸಿ: 321/2021, ದಿನಾಂಕ : 28/07/2021.

*********

**ಪ್ರಸ್ತಾವನೆ :**

ಸರ್ಕಾರವು ಅಸಹಾಯಕ ವೃದ್ಧರಿಗೆ / ನಿರ್ಗತಿಕ ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಸಾಮಾಜಿಕ ಭದ್ರತೆ ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನವನ್ನು ಅರ್ಹ ಫಲಾನುಭವಿಗಳಿಗೆ ನೀಡುತ್ತಿರುತ್ತದೆ.

ಮೇಲೆ [1] ರಲ್ಲಿ ಓದಲಾದ ಸರ್ಕಾರಿ ಆದೇಶದನ್ವಯ ವಿಧವಾ ವೇತನ ಮತ್ತು ಅಂಗವಿಕಲ ವೇತನದಡಿ 40% ರಿಂದ 75% ರಷ್ಟು ಅಂಗವೈಕಲ್ಯವಿರುವ ಫಲಾನುಭವಿಗಳಿಗೆ ರೂ. 600/-ಗಳ ಮಾಸಾಶನ ನೀಡಲಾಗುತ್ತಿದೆ.

ಮೇಲೆ [2] ರಲ್ಲಿ ಓದಲಾದ ಸರ್ಕಾರಿ ಆದೇಶದನ್ವಯ ಸಂಧ್ಯಾ ಸುರಕ್ಷಾ ರೂ.1000/- ಗಳ ಮಾಸಾಶನ ನೀಡಲಾಗುತ್ತಿದೆ.

ಮೇಲೆ [3] ರಲ್ಲಿ ಓದಲಾದ ದಿನಾಂಕ : 28/7/2021ರ ಸಚಿವ ಸಂಪುಟ ನಿರ್ಣಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕಂದಾಯ ಇಲಾಖೆಯಡಿ ಈ ಕೆಳಕಂಡಂತೆ ಘೋಷಣೆ ಮಾಡಿರುತ್ತಾರೆ.

"ಸಂಧ್ಯಾ ಸುರಕ್ಷಾ ಯೋಜನೆಯಡಿಯಲ್ಲಿ ನೀಡುತ್ತಿರುವ ಮೊತ್ತವನ್ನು ಪ್ರಸ್ತುತ ಇರುವ ರೂ.1000/- ರಿಂದ ರೂ.1200/- ಗಳಿಗೆ ಹೆಚ್ಚಿಸಲು / ಶೇಕಡ 40 ರಿಂದ ಶೇಕಡ 75ರಷ್ಟು ಅಂಗವಿಕಲತೆಯುಳ್ಳ ಫಲಾನುಭವಿಗಳಿಗೆ ಪ್ರಸುತ ನೀಡುತ್ತಿರುವ ವೇತನವನ್ನು ರೂ.600/- ರಿಂದ ರೂ.800/- ಗಳಿಗೆ ಹೆಚ್ಚಿಸಲು / ಹಾಲಿ ನೀಡಲಾಗುತ್ತಿರುವ ವಿಧವಾ ವೇತನವನ್ನು ರೂ.600/- ರಿಂದ ರೂ.800/- ಗಳಿಗೆ ಹೆಚ್ಚಿಸಲು ಸಚಿವ ಸಂಪುಟವು ನಿರ್ಧರಿಸಿತು."

ಈ ಹಿನ್ನಲೆಯಲ್ಲಿ ಸಂಧ್ಯಾ ಸುರಕ್ಷಾ / ವಿಧವಾ ವೇತನ ಮತ್ತು ಅಂಗವಿಕಲ ವೇತನಗಳಡಿ ನೀಡಲಾಗುತ್ತಿರುವ ಮಾಸಾಶನದ ಮೊತ್ತವನ್ನು ಹೆಚ್ಚಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಕಂಇ 39 ಎಮ್‌ಎಸ್‌ಟಿ 2021,**
**ಬೆಂಗಳೂರು, ದಿನಾಂಕ : 31ನೇ ಜುಲೈ 2021.**

ಸಂಧ್ಯಾ ಸುರಕ್ಷಾ / ವಿಧವಾ ವೇತನ ಮತ್ತು ಅಂಗವಿಕಲ ವೇತನಗಳಡಿ ನೀಡಲಾಗುತ್ತಿರುವ ಮಾಸಾಶನದ ಮೊತ್ತವನ್ನು ದಿನಾಂಕ : 01/08/2021ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಹೆಚ್ಚಿಸಿ ಆದೇಶಿಸಿದೆ.

1. ಸಂಧ್ಯಾ ಸುರಕ್ಷಾ ಯೋಜನೆಯಡಿಯಲ್ಲಿ ನೀಡುತ್ತಿರುವ ಮೊತ್ತವನ್ನು ಪ್ರಸ್ತುತ ಇರುವ ರೂ. 1000/- ರಿಂದ ರೂ. 1200/- ಗಳಿಗೆ ಹೆಚ್ಚಿಸಲಾಗಿದೆ.
2. ಶೇಕಡ 40 ರಿಂದ ಶೇಕಡ 75ರಷ್ಟು ಅಂಗವಿಕಲತೆಯುಳ್ಳ ಫಲಾನುಭವಿಗಳಿಗೆ ಪ್ರಸ್ತುತ ನೀಡುತ್ತಿರುವ ವೇತನವನ್ನು ರೂ. 600/- ರಿಂದ ರೂ. 800/- ಗಳಿಗೆ ಹೆಚ್ಚಿಸಲಾಗಿದೆ.
3. ಹಾಲಿ ನೀಡಲಾಗುತ್ತಿರುವ ವಿಧವಾ ವೇತನವನ್ನು ರೂ. 600/- ರಿಂದ ರೂ. 800/- ಗಳಿಗೆ ಹೆಚ್ಚಿಸಲಾಗಿದೆ.



Scanned with CamSca

ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಈಗಾಗಲೇ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳಿಗೆ ಈ ಆದೇಶದಲ್ಲಿ ಹೆಚ್ಚಿಸಿರುವ ಮಾಸಾಶನ ಮೊತ್ತವನ್ನು ವಿತರಿಸಲು ಆಯುಕ್ತರು, ಖಜಾನೆ ಆಯುಕ್ತಾಲಯ ಹಾಗೂ ಜಿಲ್ಲಾ ಖಜಾನಾಧಿಕಾರಿಗಳು / ಉಪ ಖಜಾನಾಧಿಕಾರಿಗಳು ಇವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

31/07/2021
([illegible])
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ(ಸೇವೆಗಳು-3,ಕೆ.ಎ.ಟಿ.ಬಾ.,
ಭೂ.ಸು.ಕೋ ಮತ್ತು ಸಾ.ಭ & ಪಿಂಚಣಿ)

ಇವರಿಗೆ : ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸಸೌಧ, ಬೆಂಗಳೂರು ಇವರಿಗೆ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿತ 100 ಪ್ರತಿಗಳನ್ನು ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಭವನ, ಬೆಂಗಳೂರು ಇವರಿಗೆ ಒದಗಿಸಬೇಕೆಂದು ಕೋರಿದೆ.

ಪ್ರತಿಯನ್ನು :

1. ಮಹಾಲೇಖಪಾಲರು [ಲೆಕ್ಕಪತ್ರ & ಲೆಕ್ಕ ತಪಾಸಣೆ], [ಎ & ಇ] ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ
5. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿಗಳು [ಆಯವ್ಯಯ & ಸಂಪನ್ಮೂಲ] ವಿಧಾನಸೌಧ, ಬೆಂಗಳೂರು.
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಬೆಳಗಾವಿ / ಕಲಬುರಗಿ ವಿಭಾಗ.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಮಾನ್ಯ ಕಂದಾಯ ಸಚಿವರ ವಿಶೇಷ ಕರ್ತವ್ಯಾಧಿಕಾರಿ, ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಮುಖ್ಯಕಾರ್ಯದರ್ಶಿರವರ ಜಂಟಿ ಕಾರ್ಯದರ್ಶಿ, (ಸಚಿವ ಸಂಪುಟ ಶಾಖೆ)ವಿಧಾನ ಸೌಧ, ಬೆಂಗಳೂರು. (ಸಚಿವ ಸಂಪುಟದ ಪ್ರಕರಣ ಸಂಖ್ಯೆ : ಸಿ : 319/2021 / ಸಿ : 320/2021 / ಸಿ : 321/2021, ದಿನಾಂಕ : 28/07/202).
12. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಯೋಜನೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
14. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, [ವೆಚ್ಚ-7], ವಿಧಾನಸೌಧ, ಬೆಂಗಳೂರು.
15. ಎಲ್ಲಾ ಉಪವಿಭಾಗಾಧಿಕಾರಿಗಳು / ತಹಸೀಲ್ದಾರ್‌ರು.
16. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
17. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತ.

Scanned with CamSca